# ಮಹಾವಿದ್ಯಾಲಯದ ಮೂಲಭೂತ ಸೌಕರ್ಯಗಳನ್ನುಸದುಪಯೋಗಪಡಿಸಿಕೊಳ್ಳಿ: ಪ್ರೊ.(ಶ್ರೀಮತಿ) ಶಶಿಕಲಾ.ಮಠ

ಹುನಗುಂದ: ಮಹಾವಿದ್ಯಾಲಯದ ಮೂಲಭೂತ ಸೌಕರ್ಯಗಳಾದ ಗ್ರಂಥಾಲಯ,ಕ್ರೀಡೆ, ಎನ್.ಸಿ.ಸಿ, ಎನ್.ಎಸ್.ಎಸ್ ಮುಂತಾದ ಇನ್ನಿತರ ಸೌಲಭ್ಯಗಳನ್ನು ವಿದ್ಯಾರ್ಥಿಗಳು ಸದ್ಬಳಕೆ ಮಾಡಿಕೊಂಡು ಜೀವನದಲ್ಲಿ ಯಶಸ್ಸು ಸಾಧಿಸಬೇಕೆಂದು ಸ್ಥಳೀಯ ವ್ಹಿ.ಎಂ.ಕೆ.ಎಸ್.ಆರ್.ವಸ್ತ್ರದ ಕಲಾ.ವಿಜ್ಞಾನ ಹಾಗೂ ವ್ಹಿ.ಎಸ್.ವಾಣಿಜ್ಯ ಮಹಾವಿದ್ಯಾಲಯದ ಪ್ರಾಚಾರ್ಯರಾದ ಹಾಗೂ ಹಳೆಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷರಾದ ಪ್ರೋ.(ಶ್ರೀಮತಿ) ಶಶಿಕಲಾ.ಮಠ ಹೇಳಿದರು.

ಮಹಾವಿದ್ಯಾಲಯದ ಹಳೆಯ ವಿದ್ಯಾರ್ಥಿ ಸಂಘದ ಅಡಿಯಲ್ಲಿ ಹಮ್ಮಿಕೊಂಡ ಬಡ ಹಾಗೂ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗಾಗಿ ಪುಸ್ತಕ ವಿತರಣಾ ಸಮಾರಂಭದ ಅಧ್ಯಕ್ಷ ಸ್ಥಾನವಹಿಸಿ ಮಾತನಾಡಿದರು. ವಿದ್ಯಾರ್ಥಿಗಳು ಪರಿಶ್ರಮದಿಂದ ಓದಿ ಪರೀಕ್ಷೆಯಲ್ಲಿ ಹೆಚ್ಚಿನ ಅಂಕಗಳನ್ನು ಪಡೆದು ಮಹಾವಿದ್ಯಾಲಯದ ಕೀರ್ತಿ ಹೆಚ್ಚಿಸಬೇಕೆಂದು ಹೇಳಿದರು. ಪರೀಕ್ಷೆಗಳಲ್ಲಿ ಶೇ.85 ಕ್ಕಿಂತ ಹೆಚ್ಚಿನ ಅಂಕ ಪಡೆದ ವಿದ್ಯಾರ್ಥಿಗಳಿಗೆ ಉಚಿತವಾಗಿ ಪುಸ್ತಕ ವಿತರಿಸಲಾಯಿತು. ಕಾರ್ಯಕ್ರಮವು ಕು.ಸವಿತಾ ಟಿ ಪ್ರಾರ್ಥನೆಯೊಂದಿಗೆ ಆರಂಭವಾಯಿತು.ಹಳೆಯ ವಿದ್ಯಾರ್ಥಿ ಸಂಘದ ಕಾರ್ಯದರ್ಶಿಯಾದ ಪ್ರೊ.ಎಲ್.ಎನ್.ಕುಲಕರ್ಣಿ ಎಲ್ಲರನ್ನು ಸ್ವಾಗತಿಸಿ ಪ್ರಾಸ್ತಾವಿಕ ನುಡಿಗಳನ್ನಾಡಿದರು, ವಾಚನಾಲಯದ ಮುಖ್ಯಸ್ಥರಾದ ಶ್ರೀ.ಎಸ್.ಎಸ್. ಕೂಡ್ಲಪ್ಪನವರು ಪುಸ್ತಕವಿತರಣೆ ನಡೆಸಿಕೊಟ್ಟರು. ಪದವಿಪೂರ್ವ ಮಹಾವಿದ್ಯಾಲಯದ ಪ್ರಾಚಾರ್ಯರಾದ ಪ್ರೊ.ಎಚ್.ಎಸ್.ಬೋಳಿಶೆಟ್ಟರ ಅವರು ಉಪಸ್ಥಿತರಿದ್ದರು. ಹಳೆಯ ವಿದ್ಯಾರ್ಥಿ ಸಂಘದ ಖಜಾಂಚಿಯವರಾದ ಪ್ರೊ.ಬಿ.ಎ.ಕಂಠಿ ಯವರು ವಂದಿಸಿದರು. ಪ್ರೊ.ಎಸ್.ಆರ್.ನಾಗಣ್ಣವರ ಅವರು ಕಾರ್ಯಕ್ರಮ ನಿರೂಪಿಸಿದರು.

04/09/2019

Coordinator
IQAC
Vijaya Mahantesh Krupaposhit S.R.Vastrad Arts,Science & Vijay Shankarappa Bellihal Commerce College, Hungund-587118
Dist:Bagalkote State:Karnataka

PRINCIPAL
Vijaya Mahantesh Krupaposhit
S.R.Vastrad Arts, Science And Vijay
Shankarappa Bellihal Commerce College
Hungund-587118 (Dist:Bagalkot-Karnataka

Date of Function - 4-09-2019

Date of Publication - 5-09-2019

V.M.K.S.R Vastrad Art, Science And V.S.Bellihal Commerce College
Hungund

# ಶೈಕ್ಷಣಿಕ ಸೌಲಭ್ಯ ಪಡೆದು ಯಶಸ್ಸು ಸಾಧಿಸಿ

ಹುನಗುಂದ: ಗ್ರಂಥಾಲಯ, ಕ್ರೀಡೆ, ಎನ್‌ಸಿಸಿ, ಎನ್‌ಎಸ್‌ಎಸ್ ಮುಂತಾದ ಸೌಲಭ್ಯಗಳನ್ನು ವಿದ್ಯಾರ್ಥಿಗಳು ಸದ್ಬಳಕೆ ಮಾಡಿ ಕೊಂಡು ಜೀವನದಲ್ಲಿ ಯಶಸ್ಸು ಸಾಧಿಸಬೇಕು ಎಂದು ಪ್ರಾಚಾರ್ಯೆ ಪ್ರೊ.ಶಶಿಕಲಾ ಮಠ ಹೇಳಿದರು.

ಪಟ್ಟಣದ ವಿಎಂಎಸ್‌ಆರ್‌ವಿ ಕಲಾ, ವಿಜ್ಞಾನ ಹಾಗೂ ವಿ.ಎಸ್. ವಾಣಿಜ್ಯ ಕಾಲೇಜಿನಲ್ಲಿ ಹಳೇ ವಿದ್ಯಾರ್ಥಿ ಸಂಘದಡಿ ಬುಧವಾರ ಹಮ್ಮಿಕೊಂಡಿದ್ದ ಬಡ ಹಾಗೂ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪುಸ್ತಕ ವಿತರಣೆ ಸಮಾರಂಭದಲ್ಲಿ ಅವರು ಮಾತನಾಡಿದರು.

ಪರೀಕ್ಷೆಗಳಲ್ಲಿ ಶೇ.85ಕ್ಕಿಂತ ಹೆಚ್ಚಿನ ಅಂಕ ಪಡೆದ ವಿದ್ಯಾರ್ಥಿಗಳಿಗೆ ಉಚಿತವಾಗಿ ಪುಸ್ತಕ ವಿತರಿಸಲಾಯಿತು.

ಹಳೇ ವಿದ್ಯಾರ್ಥಿ ಸಂಘದ ಕಾರ್ಯದರ್ಶಿ ಪ್ರೊ.ಎಲ್.ಎನ್. ಕುಲಕರ್ಣಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಗ್ರಂಥಾಲಯ ಮುಖ್ಯಸ್ಥ ಎಸ್.ಎಸ್. ಕೂಡ್ಲಪ್ಪನವರು, ಡಾ.ಡಿ.ಎಸ್. ತಿಪ್ಪೇಸ್ವಾಮಿ, ನವೀನ ಪಾಟೀಲ, ಪ್ರಾಚಾರ್ಯ ಪ್ರೊ.ಎಚ್.ಎಸ್.ಬೋಳಿಶೆಟ್ಟರ ಉಪಸ್ಥಿತರಿದ್ದರು. ಸವಿತಾ ಟಿ. ಪ್ರಾರ್ಥಿಸಿದರು. ಪ್ರೊ.ಎಸ್.ಆರ್. ನಾಗಣ್ಣವರ ನಿರೂಪಿಸಿದರು. ಪ್ರೊ.ಬಿ.ಎ. ಕಂಠಿ ವಂದಿಸಿದರು.



ಹುನಗುಂದದ ವಿಎಂಎಸ್‌ಆರ್‌ವಿ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಪ್ರಾಚಾರ್ಯೆ ಪ್ರೊ.ಶಶಿಕಲಾ ಮಠ ಪ್ರತಿಭಾವಂತ ವಿದ್ಯಾರ್ಥಿನಿಗೆ ಪುಸ್ತಕ ವಿತರಿಸಿದರು. ಎಸ್.ಎಸ್. ಕೂಡ್ಲಪ್ಪನವರು, ಪ್ರೊ.ಎಚ್.ಎಸ್. ಬೋಳಿಶೆಟ್ಟರ ಇದ್ದರು.

Coordinator
IQAC
Vijaya Mahantesh Krupapohit S.R.Vastrad
Arts,Science & Vijay Shankarappa Bellihal
Commerce College, Hungund-587118
Dist:Bagalkote State:Karnataka

Principal 6/9/19
Vijaya Mahantesh Krupaposhit
S.R.Vastrad Arts, Science & V.S.Bellihal
Commerce College,Hungund-587118